ನೋಡಿ ಹೇಳಿದರು: ''ಯಾಕೆ ಅಳುತ್ತೀಯಾ ಪೆದ್ದು! ತಾಯಿ ಎಲ್ಲಿಗೆ ಹೋಗಿದ್ದಾರಂತೆ? ಅವರು ಇಲ್ಲೇ ಇದ್ದಾರೆ!'' ಮಹಾರಾಜರ ಆ ಮಾತು ಈಗಲೂ ನನ್ನ ಕಿವಿಯಲ್ಲಿ ಧ್ವನಿಸುತ್ತಿದೆ. ಚಿಕ್ಕಮ್ಮ ಇಂದಿಗೂ ಜಯರಾಮಬಾಟಿಯಲ್ಲಿರುವ ಅವರ ಹೊಸ ಮನೆಯಲ್ಲಿ ಇದ್ದಾರೆ ಎಂದೇ ನಾನು ನಂಬಿದ್ದೇನೆ. ಈಗ ನನ್ನ ವಯಸ್ಸು ತೊಂಬತ್ತು ಸಮೀಪಿಸಿದೆ. ಕೆಲಸ ಮಾಡುವ ಸಾಮರ್ಥ್ಯವಿಲ್ಲ. ಆದರೂ ಪ್ರತಿದಿನ ನಾನು ಹಳದಿಯಿಂದ ಜಯರಾಮಬಾಟಿಗೆ ಹೋಗುತ್ತೇನೆ. ಚಿಕ್ಕಮ್ಮನ ಅಂಗಳವನ್ನು ಗುಡಿಸುತ್ತೇನೆ. ಅವರು ಇಂದಿಗೂ ಈ ಅಂಗಳದಲ್ಲೇ ನಡೆದಾಡುತ್ತಾರೆ ಎಂದು ನಾನು ನಂಬಿದ್ದೇನೆ. ಮಹಾರಾಜರುಗಳು ನನಗೆ ಪ್ರಸಾದ ನೀಡಲು ವ್ಯವಸ್ಥೆ ಮಾಡಿದ್ದಾರೆ. ಅವರು ಹೇಳುತ್ತಾರೆ: ''ಈ ವಯಸ್ಸಿನಲ್ಲಿ ನೀನು ಇಷ್ಟೊಂದು ಕಷ್ಟಪಟ್ಟು ಗುಡಿಸುವುದು ಅಗತ್ಯವಿಲ್ಲ. ನಿನಗೆ ಮನಸ್ಸಾದಾಗ ಬಂದು ಪ್ರಸಾದ ಪಡೆದುಕೋ.'' ನಾನು ಈಗಲೂ ಪ್ರತಿದಿನ ಅಲ್ಲಿಗೆ ಹೋಗುತ್ತೇನೆ, ಪ್ರಸಾದ ಪಡೆಯುತ್ತೇನೆ; ಆದರೆ ಗುಡಿಸುವುದನ್ನು ನಿಲ್ಲಿಸಿಲ್ಲ. ಕಾರಣ, ಈ ಅಂಗಳದಲ್ಲಿ ಇಂದಿಗೂ ಚಿಕ್ಕಮ್ಮ ನಡೆದಾಡುತ್ತಾರೆ. ಆದ್ದರಿಂದಲೇ ಜೀವದ ಅರಕೆಯಂತೆ ಅಂಗಳವನ್ನು ಗುಡಿಸುತ್ತೇನೆ.

ಚಿಕ್ಕಮ್ಮನ ಹೊಸ ಮನೆಗೆ ಬಂದಾಗ ನಾನು ಮತ್ತೆ ನನ್ನ ಬಾಲ್ಯಕಾಲಕ್ಕೆ ಮರಳುತ್ತೇನೆ. ಕಣ್ಣ ಮುಂದೆ ಅದೇ ಬೆಕ್ಕುಗಳು ಬಂದುಬಿಡುತ್ತವೆ, ಚಿಕ್ಕಮ್ಮನ ಗಿಣಿ ಗಂಗಾರಾಮನನ್ನೂ ನೋಡುತ್ತೇನೆ. ಚಿಕ್ಕಮ್ಮ ಹೊಸ ಮನೆಯ ಬಾಗಿಲ ಬಳಿ ನಿಂತಿರುವುದನ್ನು ನಾನು ಕಾಣುತ್ತೇನೆ. ಅವರು ಹೇಳುತ್ತಾರೆ, ''ಮಗೂ ಶಾಂತಿ, ಹೋಗಿ ನೋಡು – ದನಕರು ಮೇಯಿಸುವ ಹುಡುಗ ಮರಳಿ ಬಂದಿದ್ದಾನೋ ಇಲ್ಲವೋ ಅಂತ. ತುಂಬ ತಡವಾಯಿತು. ಅವನು ಊಟ ಮಾಡದಿದ್ದರೆ, ನನಗೆ ಊಟ ಸೇರುವುದಿಲ್ಲ.''

ಚಿಕ್ಕಮ್ಮನ ಕಾಲು ನೀಡಿ ಕುಳಿತ ಭಾವಚಿತ್ರ ನನ್ನ ಕಣ್ಣಮುಂದೆ ಜೀವಂತವಾಗಿ ಬಂದಂತೆ ಭಾಸವಾಗುತ್ತದೆ. ಅವರು ವೃದ್ಧೆ-ಆದರೆ ಅವರ ಕಣ್ಣುಗಳಲ್ಲಿ ಅದೆಂಥ ಮಮತೆ! ಆದರೆ ನಾನು ಒಂದು ದಿನ ಅವರನ್ನು ಬೇರೆ ಒಂದು ಮೂರ್ತಿಯಾಗಿಯೂ ಕಂಡಿದ್ದೇನೆ. ನಾನು ಹಾಗೂ ನನ್ನ ಒಬ್ಬಳು ಅಕ್ಕ ಅಂದು ಚಿಕ್ಕಮ್ಮನ ಹೊಸ ಮನೆಗೆ ಹೋಗಿದ್ದೆವು. ಚಿಕ್ಕಮ್ಮ ಮನೆಯ ಮುಂದಿನ ಜಗಲಿಯಲ್ಲಿ ಕುಳಿತಿದ್ದರು. ಇದ್ದಕ್ಕಿದ್ದಂತೆ ನೋಡಿದೆ – ಚಿಕ್ಕಮ್ಮ ನಿಂತುಬಿಟ್ಟಿದ್ದರು. ಅವಾಕ್ಕಾಗಿ ನೋಡಿದೆ, ಅವರು ನೋಡಲು ಚಿಕ್ಕಮ್ಮನಂತೆಯೇ ಇದ್ದಾರೆ, ಆದರೆ ಇವರು ಯಾವ ಚಿಕ್ಕಮ್ಮ? ಯುವತಿ, ನಳನಳಿಸುವ ಕಾಂತಿ. ಹಿಂಭಾಗದಲ್ಲಿ ಹರಡಿದ ಕೂದಲು – ಕಾಲುಗಳ ಬಳಿ ನೆಲವನ್ನೇ ಸ್ಪರ್ಶಿಸುವಂತಿದ್ದ ಕೂದಲು. ಕಾಳೀಮಾತೆಯಂತೆಯೇ ಕಂಡರು. ನಾನು ಭಯಗೊಂಡು ಅಕ್ಕನ ಬಳಿ ಪಿಸುಗುಟ್ಟಿದ್ದೆ: ''ಅಕ್ಕಾ, ಚಿಕ್ಕಮ್ಮನನ್ನು ನೋಡು. ಅವರ ತಲೆಯಲ್ಲಿ ಎಷ್ಟೊಂದು ಕೂದಲು!'' ಅಕ್ಕನೂ ಅದೇ ದೃಶ್ಯವನ್ನು ಕಂಡಳು. ಭಯಗೊಂಡು ಆ ಕ್ಷಣದಲ್ಲೇ ನಾವಿಬ್ಬರೂ ಮನೆಗೆ ಓಡಿಬಂದೆವು. ಚಿಕ್ಕಮ್ಮನ ಅದೇ ಮೂರ್ತಿ ಇಂದೂ ನನಗೆ ನೆನಪಿದೆ.

ಚಿಕ್ಕಮ್ಮ ನನಗೆ 'ಶಾಂತಿ' ಎಂದು ಹೆಸರಿಟ್ಟಿದ್ದರು. ಇಂದು ನನಗಿರುವುದು ಒಂದೇ ಆಸೆ – ಚಿಕ್ಕಮ್ಮ ಯಾವಾಗ ನನ್ನನ್ನು ಮಡಿಲಿಗೆಳೆದುಕೊಂಡು ನನಗೆ ಪೂರ್ಣ ಶಾಂತಿಯನ್ನು ನೀಡುವರು ಎಂದು.[೩] ✿

***ಸಂಗ್ರಹ: ಕಾರ್ತಿಕ್ ಸೇನ್ ಮತ್ತು ಅಧ್ಯಾಪಕ ತಡಿತ್ ಕುಮಾರ್ ಬಂದ್ಯೋಪಾಧ್ಯಾಯ***

***ಸಂಗ್ರಹಿಸಿದ ದಿನ:*** *೧೯೬೮ ಜನವರಿ, ಜಯರಾಮಬಾಟಿ*

---

೩ ಶಾಂತಿರಾಮ ದಾಸ್ ತೀರಿಕೊಂಡಿದ್ದು ೧೯೬೮ರಲ್ಲಿ.

## ಗೋಧಿಯ ಚೀಲ

ಪರ್ಷಿಯದ ದೊರೆ ವಿಷ್ಟಾಸ್ಪ ಒಂದು ದಿನ ಸುತ್ತಾಡುತ್ತಿದ್ದಾಗ ಒಂದು ಸುಂದರ ತೋಟವನ್ನು ಕಂಡ. ಇದನ್ನು ಯಾರು ಬೆಳೆಸಿದ್ದಾರೆ, ನೋಡಬೇಕಲ್ಲ? ಎಂದು ಅವನು ತನ್ನ ಮಂತ್ರಿಯನ್ನು ಅಲ್ಲಿಗೆ ಕಳಿಸಿದ. ಅದು ಸಾಧು ಝೊರಾಸ್ಟರ್‌ನದು ಎಂದು ತಿಳಿಯಿತು. ಅವನನ್ನು ತನ್ನ ಅರಮನೆಗೆ ಆಹ್ವಾನಿಸಬೇಕು ಎಂದು ರಾಜನು ತನ್ನ ಬಳಗದೊಂದಿಗೆ ಅವನ ತೋಟಕ್ಕೆ ಹೋದ. ಅವರನ್ನು ಸ್ವಾಗತಿಸಿದ ಝೊರಾಸ್ಟರ್ ಕೇಳಿದ: ''ಸ್ವಾಮಿ, ನನ್ನಿಂದೇನಾಗಬೇಕು?'' ರಾಜ ತನ್ನ ಕೋರಿಕೆಯನ್ನು ಅವನಿಗೆ ತಿಳಿಸಿದ. ಅವನ ಆಹ್ವಾನವನ್ನು ಒಪ್ಪದೆ, ಝೊರಾಸ್ಟರ್ ಒಂದು ಚೀಲದಲ್ಲಿ ಒಂದಿಷ್ಟು ಗೋಧಿಯನ್ನು ತುಂಬಿಸಿ ಕೊಟ್ಟ. ರಾಜ ಆ ಕೊಡುಗೆಯೊಂದಿಗೆ ತನ್ನ ಅರಮನೆಗೆ ಮರಳಿದ.

ಸಾಧು ಕೊಟ್ಟಿದ್ದರಿಂದ ಅದು ವಿಶೇಷವಾದದ್ದೇ ಇರಬೇಕು ಎಂದು ಅದನ್ನು ಒಂದು ಚಿನ್ನದ ಪಟ್ಟಿಗೆಯಲ್ಲಿ ತುಂಬಿಸಿ ಇಟ್ಟ ರಾಜ. ದಿನವೂ ಅದನ್ನು ತೆಗೆದು ನೋಡುತ್ತಿದ್ದ. ಅದರಿಂದ ಏನಾದರೂ ವಿಶೇಷ ಅರ್ಥ ಹೊರಡುವುದೋ, ಏನಾದರೂ ಪವಾಡ ನಡೆಯುವುದೋ ಎಂದು. ತುಂಬ ದಿನಗಳು ಕಳೆದವು. ಏನೂ ಆಗಲಿಲ್ಲ. ರಾಜನು ವಿಪರೀತ ಅಸಮಾಧಾನಗೊಂಡು, ''ನಡೆಯಿರಿ ಆ ಸಾಧುವಿನ ಕಡೆಗೆ! ಅವನನ್ನೇ ಕೇಳುವುದು, ಇದನ್ನೇಕೆ ಕೊಟ್ಟೆ ಎಂದು!'' ಎಂದ. ರಾಜನು ಝೊರಾಸ್ಟರ್‌ನ ಬಳಿಗೆ ಹೋಗಿ, ಅವನ ಮುಂದೆ ಚಿನ್ನದ ಪಟ್ಟಿಗೆಯನ್ನಿಟ್ಟು, ''ಏನಿದರ ಅರ್ಥ? ಹೇಳು!'' ಎಂದ. ಸಾಧು ಶಾಂತವಾಗಿ ಉತ್ತರಿಸಿದ, ''ಇದೇ ಧಾನ್ಯವನ್ನು ನೀನು ನೆಲದಲ್ಲಿ ಬಿತ್ತಿ ನೀರು, ಗಾಳಿ ನೀಡಿದ್ದರೆ ಏನಾಗುತ್ತಿತ್ತು? ಮೊದಲು ಅದನ್ನು ಚಿನ್ನದ ಪೆಟ್ಟಿಗೆಯಿಂದ ಹೊರತೆಗೆದು, ಬಳಿಕ ನೆಲದಲ್ಲಿ ಬಿತ್ತು. ಬಳಿಕ ನೀರು ಎರೆದು ಆರೈಕೆ ಮಾಡು'' ಎಂದ. ರಾಜನಿಗೆ ಅರ್ಥವಾಯಿತು. ತಾನೂ ಚಿನ್ನದ, ಮೆರುಗಿನ, ಐಶ್ವರ್ಯದ ಅರಮನೆಯಿಂದ ಹೊರಗೆ ಬರಬೇಕು; ಪ್ರಕೃತಿಯಿಂದ ಜೀವನದ ಪಾಠಗಳನ್ನು ಕಲಿಯಬೇಕು. ಹಾಗಿದ್ದರೆ ಮಾತ್ರ ಸುಂದರ ತೋಟ ಬೆಳೆಯಲು ಸಾಧ್ಯ; ಸುಂದರ ಬದುಕು ಕಟ್ಟಿಕೊಳ್ಳಲು ಸಾಧ್ಯ ಎಂದರಿತ. ಸಾಧುವಿಗೆ ನಮಸ್ಕರಿಸಿ ರಾಜ ಹಿಂದಿರುಗಿದ.

*'Immortal Stories' ಗ್ರಂಥದಿಂದ*

# ವೃದ್ಧ ಮಹಿಳೆ





ಮೂಲ ಹಿಂದೀ: **ಸ್ವಾಮಿ ಜಪಾನಂದ**

ಕನ್ನಡಕ್ಕೆ : **ರೂಪಶ್ರೀ ನಾಗರಾಜ್**

**ಪ**ಠಾನ್‌ಕೋಟ್ (ಪಂಜಾಬ್) ನಗರದ ಹೊರಗೆ ಒಂದು ಸಣ್ಣ ಸುಂದರವಾದ ಶಿವಾಲಯವಿದೆ. ಅಲ್ಲಿ ಒಂದು ಕುಂಡವಿದೆ. ಅಲ್ಲಿ ಬುಗ್ಗೆಯಿಂದ ಉಂಟಾದ ನೀರಿನ ಹರಿವು ಒಂದು ಸಣ್ಣ ನದಿಯಂತೆ ಆಗಿದೆ. ಮಳೆಗಾಲದಲ್ಲಿ ನೀರಿನ ರಭಸ ಸ್ವಲ್ಪ ಹೆಚ್ಚಾಗಿಯೇ ಇತ್ತು. ಹಾಗೆಯೇ ಸುತ್ತಮುತ್ತಲಿನ ವನಸಿರಿಯು ಹಸಿರಾಗಿ ಕಣ್ಣು ತುಂಬವಂತಿತ್ತು.

ಸಂನ್ಯಾಸಿ ಅಲೆದಾಡುತ್ತಾ ಡಾಲ್‌ಹೌಸಿ – ಚಂಬಾ ತಪ್ಪಲಿನಿಂದ ಇಲ್ಲಿಗೆ ಬಂದಿದ್ದ. ಆ ಶಿವಮಂದಿರದ ಪಕ್ಕದಲ್ಲಿ ಒಂದು ಸಣ್ಣ ಕೊಠಡಿಯಿತ್ತು. ಪೂಜಾರಿಯ ನಿರ್ದೇಶನದಂತೆ ಅಲ್ಲಿ ಹೋಗಿ ಉಳಿದುಕೊಂಡ. ಆದರೆ ರಾತ್ರಿ ಅವನಿಗೆ ಹೇಗೆ ಜ್ವರ ಏರಿತೆಂದರೆ, ಇಡೀ ರಾತ್ರಿ ಮತ್ತು ಮಾರನೇ ದಿನ ಸಂಜೆಯ ನಾಲ್ಕರವರೆಗೆ ಪ್ರಜ್ಞಾಹೀನನಾಗಿ ಬಿದ್ದುಕೊಂಡಿದ್ದ. ತಪ್ಪಲಿನ ಆ ಪೂಜಾರಿಯೂ ಸಜ್ಜನರಾಗಿದ್ದರು. ಆದರೆ ಅವರಿಗೂ ಮಲೇರಿಯಾ ಜ್ವರ ಏರಿತ್ತು. ಅವರು ನಿಶ್ಶಕ್ತರಾಗಿ ಬಿದ್ದುಕೊಂಡಿದ್ದರು. ಒಬ್ಬ ಪಂಜಾಬಿ ವೃದ್ಧ ಮಾತೆ ಪೂಜಾರಿಯ ಸೇವೆ ಮಾಡಿ, ಯಾರೋ ಸಂನ್ಯಾಸಿ ಬಂದಿದ್ದಾರೆಂದು ತಿಳಿದು, ಭೇಟಿಯಾಗಿ ನಮಸ್ಕರಿಸಲು ಆ ಕೋಣೆಗೆ ಹೋದಳು. ಅಲ್ಲಿ ಸಂನ್ಯಾಸಿ ಮಲಗಿದ್ದನ್ನು ನೋಡಿ, ನಿದ್ದೆ ಮಾಡುತ್ತಿದ್ದಾರೆ, ಆದರೆ ಸಂಜೆಯಾಗುತ್ತಿರುವ ಕಾರಣ ಎಬ್ಬಿಸುವುದು ಸೂಕ್ತವೆಂದು ಯೋಚಿಸಿ, ‘‘ಸ್ವಾಮಿ, ಸಂಜೆಯಾಗುತ್ತಿದೆ, ಅದೆಷ್ಟು ವಿಶ್ರಾಂತಿ ಪಡೆಯುತ್ತೀರಿ?’’ ಎಂದು ಮೇಲಿಂದ ಮೇಲೆ ಕರೆಯತೊಡಗಿದಳು.

ಇದರಿಂದ ಸಂನ್ಯಾಸಿ ಎಚ್ಚರಗೊಂಡ. ಆಗ ಅಷ್ಟು ಹೊತ್ತೂ ಪ್ರಜ್ಞಾಹೀನ ಸ್ಥಿತಿಯಲ್ಲಿ ಇದ್ದೆನೆಂದು ಅವನಿಗೆ ಅರಿವಾಯಿತು. ಅವನಿಗೆ ಜ್ವರ ಬಂದ ವಿಷಯ ತಿಳಿದ ಆ ವೃದ್ಧ ಮಾತೆ ಅಳತೊಡಗಿದಳು, ‘‘ಅಯ್ಯೋ, ಜ್ವರದಲ್ಲಿ ಹಸಿವಿನಿಂದ ಹಾಗೇ ಇದ್ದೀರಲ್ಲ, ನಾನೇನಾದರೂ ದೈವಪ್ರೇರಣೆಯಿಂದ ಬಾರದೆ ಹೋಗಿದ್ದರೆ? ನಗರದಲ್ಲಿ ಮನೆ ಮನೆಯಲ್ಲೂ ಎಲ್ಲರೂ ಜ್ವರದಿಂದ ಮಲಗಿದ್ದಾರೆ, ಮಲೇರಿಯಾ ಜ್ವರ ಬಹಳ ಕೆಟ್ಟದ್ದು. ನಾನು ಈಗಲೇ ಹೋಗಿ ಹಾಲು ತರುತ್ತೇನೆ. ಬಿಸಿ ಬಿಸಿ ಹಾಲು ಕುಡಿದರೆ ಸ್ವಲ್ಪ ಎಚ್ಚರವಾಗಿ ಸರಿಯಾಗುತ್ತದೆ’’ ಎಂದಳು. ಸಂನ್ಯಾಸಿ ಎದ್ದು ಕುಳಿತುಕೊಳ್ಳಲು ಪ್ರಯತ್ನಿಸಿದ. ಆದರೆ ಒಂದೇ ರಾತ್ರಿಯಲ್ಲಿ ಆತನಿಗೆ ಎಷ್ಟು ನಿಶ್ಶಕ್ತಿಯಾಗಿತ್ತು ಎಂದರೆ ಏಳಲೂ ಸಾಧ್ಯವಾಗಲಿಲ್ಲ. ವೃದ್ಧ ಮಾತೆಯು ಪ್ರೀತಿಯಿಂದ ಅವನನ್ನು ಹಿಡಿದು ಕುಳ್ಳಿರಿಸಿದಳು. ನೀರು ತಂದು ಎದುರುಗಿಟ್ಟು ಬಜಾರಿನಿಂದ ಹಾಲು ತರಲು ಹೊರಟುಹೋದಳು. ಬಜಾರ್ ಸ್ವಲ್ಪ ದೂರವಿತ್ತು. ಅವಳು ಹಾಲು ತರುವಾಗ ಅವಳ ಜೊತೆ ಒಬ್ಬ ಹುಡುಗನೂ ಇದ್ದ. ಅವಳು ಅವನಿಗೆ ಹೇಳತೊಡಗಿದಳು, ‘‘ಈ ಪರಿಸ್ಥಿತಿಯಲ್ಲಿ ಯಾರಾದರೂ ಇದ್ದಾಗ ಅವರ ಸೇವೆ ಮಾಡುವುದೇ ನಿಜವಾದ ಧರ್ಮ. ಬೆಳಿಗ್ಗೆ ಬೇಗ ಬಂದು ನೋಡಿ ಹಾಲು ನೀಡು, ನಂತರ ನಾನು ಹೋಗುತ್ತೇನೆ. ಖಿಚಡಿ ಅಥವಾ ರೊಟ್ಟಿ ಏನಾದರೂ ತಿನ್ನಬೇಕು ಎನಿಸಿದರೆ ಕೇಳಿಕೊಂಡು ಬಾ. ನಾನು ಬರುವಾಗ ತೆಗೆದುಕೊಂಡು ಬಂದು ತಿನ್ನಿಸುತ್ತೇನೆ. ಮತ್ತೆ ಸಂಜೆ ಕೂಡ ಇಲ್ಲಿಗೆ ಬಂದು ಅವರನ್ನು ಉಪಚರಿಸು’’ ಎಂದಳು.

ಸುಮಾರು ದಿನಗಳ ಕಾಲ ಜ್ವರವಿತ್ತು. ಆದರೆ ಈ ಮಾತೆಯು ಸಂನ್ಯಾಸಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿಕೊಂಡು ಸೇವೆಯನ್ನು ಮಾಡಿದಳು. ಆಗ ಅಚಾನಕ್ಕಾಗಿ ಆರ್ಯ ಸಮಾಜದ ಅಧ್ಯಕ್ಷ ಈ ದೃಶ್ಯವನ್ನು ನೋಡಿ, ಅವರು ತಕ್ಷಣ ಗಾಡಿಯನ್ನು ತರಿಸಿ, ಸಮಾಜದ ವಸತಿಗೃಹಕ್ಕೆ ಸಂನ್ಯಾಸಿಯನ್ನು ಕರೆದುಕೊಂಡು ಹೋದರು, ಮತ್ತು ಒಬ್ಬ ಒಳ್ಳೆಯ ವೈದ್ಯರಿಂದ ಅವನ ಶುಶ್ರೂಷೆ ಮಾಡಿಸಿದರು. ಹೀಗ ಸರಿಸುಮಾರು ಎರಡು ತಿಂಗಳು ಕಳೆದವು. ಆ ವೃದ್ಧ ಮಾತೆಯೂ ಸಂನ್ಯಾಸಿಗೆ ನಿತ್ಯವೂ ಹಾಲು ತೆಗೆದುಕೊಂಡು ಬರುತ್ತಿದ್ದಳು.

ಈ ಘಟನೆಯಲ್ಲಿ ಕಂಡುಬರುವಂತೆ, ಮಾನವೀಯತೆಯ ಒಂದು ಉತ್ಕೃಷ್ಟ ಉದಾಹರಣೆ ಅದಾಗಿತ್ತು. ✿

# ‘ಶ್ರೀರಾಮಕೃಷ್ಣ ವಚನವೇದ’ ಭಾವಧಾರೆ - 37

ಸ್ವಾಮಿ ನಿತ್ಯಸ್ಥಾನಂದ

ನಿಜವಾಗಿ ಪಿತೃಋಣವೆಂದರೆ ಮಕ್ಕಳ ವಿಷಯದಲ್ಲಿ ತಂದೆ ತಾಯಂದಿರಿಗೆ ಇರುವ ಋಣ. ಇದನ್ನು ಪಾಲಿಸಿದರೆ ಮಕ್ಕಳೂ ತಮ್ಮ ಪಾಲಿನ ಋಣವನ್ನು ತೀರಿಸುತ್ತಾರೆ. ಒಂದು ಸಂಸ್ಕೃತ ಶ್ಲೋಕವಿದೆ:

ಮಾತಾ ಶತ್ರುಃ ಪಿತಾ ವೈರೀ ಯೇನ ಬಾಲೋ ನ ಪಾಲಿತಃ ।
ನ ಶೋಭತೇ ಸಭಾ ಮಧ್ಯೇ ಹಂಸಮಧ್ಯೇ ಬಕೋ ಯಥಾ ॥

‘‘ಮಕ್ಕಳಿಗೆ ವಿದ್ಯೆಯನ್ನು, ಉನ್ನತ ಮೌಲ್ಯಗಳನ್ನು ನೀಡದ ತಂದೆತಾಯಿಗಳು ನಿಜವಾಗಿಯೂ ಅವರ ಶತ್ರುಗಳೇ. ಅಂತಹ ಮಕ್ಕಳು ಮುಂದೆ ಹಂಸಗಳ ಮಧ್ಯೆ ಬಕಪಕ್ಷಿಗಳಂತಿರುತ್ತಾರೆ.’’ ಬಕವು ಹಂಸದಂತೆ ಬೆಳ್ಳಗೇನೋ ಇರುತ್ತದೆ, ಆದರೆ ಅದರ ಸ್ವಭಾವ ಬೇರೆ. ಅಂತಹ ಮಕ್ಕಳು ಸಮಾಜದಲ್ಲಿ ಬಕಾಸುರರಾಗುತ್ತಾರೆ–ದೋಚಿ ತಿನ್ನುವುದೊಂದೇ ಅವರ ಸ್ವಭಾವವಾಗಿರುತ್ತದೆ.

ನಾವೆಲ್ಲರೂ ರುಚಿರುಚಿಯಾದ ಪದಾರ್ಥಗಳನ್ನು ಬಯಸುತ್ತೇವೆ. ಅತ್ಯಂತ ರುಚಿಯಾದ ಪದಾರ್ಥ ಯಾವುದೆಂಬುದನ್ನು ನೋಡಿ:

‘‘ದೊಡ್ಡ ಪ್ರಮಾಣದಲ್ಲಿ ಉತ್ಸಾಹವೆಂಬ ನೀರನ್ನು ತೆಗೆದುಕೊಳ್ಳಿ, ಅದು ಚೆನ್ನಾಗಿ ಕುದಿಯುತ್ತಿರಲಿ (ಕುದಿಯುತ್ತಿರುವ ಉತ್ಸಾಹವಿರಬೇಕು). ಅದಕ್ಕೆ ಒಂದು ಪಾತ್ರೆ ತುಂಬ ದಯೆಯನ್ನು ಸುರಿಯಿರಿ. ಅನಂತರ ಪರಹಿತ ಚಿಂತನೆಯನ್ನು ಧಾರಾಳವಾಗಿ ಸೇರಿಸಿ. ಈಗ ಒಂದು ಸೌಟು ತುಂಬ ಸಹಾನುಭೂತಿಯನ್ನು ಅದಕ್ಕೆ ಹಾಕಿ. ಕೊನೆಯಲ್ಲಿ ಔದಾರ್ಯದ ಪರಿಮಳ ದ್ರವ್ಯವನ್ನು ಸೇರಿಸಿ. ಈಗ ಅದನ್ನು ಚೆನ್ನಾಗಿ ಸೌಟಿನಿಂದ ತಿರುಗಿಸಬೇಕು. ಸ್ವಾರ್ಥದ ಒಂದು ಕಣವೂ ಇಲ್ಲದಂತೆ ಅದನ್ನು ಸೋಸಬೇಕು. ಈಗ ಪ್ರೀತಿಯೆಂಬ ರಸದ್ರವ್ಯದೊಂದಿಗೆ (sause) ಅದನ್ನು ಎಲ್ಲರಿಗೂ ಬಡಿಸಬೇಕು.’’ ( J.Mauras)

### ಬೆಳವಣಿಗೆ ಒಳಗಿನಿಂದ

**ಶ್ರೀರಾಮಕೃಷ್ಣರು:** ‘‘ಸಂನ್ಯಾಸಿಯ ಕಮಂಡಲು ಆತನೊಡನೆ ನಾಲ್ಕು ಧಾಮಗಳಿಗೂ – ಬದರಿ, ದ್ವಾರಕ, ರಾಮೇಶ್ವರ, ಪುರಿ – ಹೋಗಿಬರುತ್ತದೆ. ಆದರೆ ಹಿಂದೆ ಯಾವ ರೀತಿಯಾಗಿ ಕಹಿಯಾಗಿತ್ತೊ ಹಾಗೆಯೆ ಕಹಿಯಾಗಿಯೇ ಇರುತ್ತದೆ. ಮಲಯ ಮಾರುತ ತಗಲಿದ ಗಿಡಗಳೆಲ್ಲ ಚಂದನಗಿಡವಾಗಿಬಿಡುತ್ತವೆ.



ಆದರೆ ಹತ್ತಿಯ ಗಿಡ, ಅಶ್ವತ್ಥ ಗಿಡ, ಅಮಟೆಕಾಯಿ ಮರ ಇವು ಮಾತ್ರ ಚಂದನಗಿಡಗಳಾಗಿ ಪರಿವರ್ತನೆ ಹೊಂದುವುದಿಲ್ಲ.’’ *(ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು. ೧೧೧)*

ಅನೇಕ ವ್ಯಕ್ತಿಗಳು ಎಷ್ಟೇ ಸಾಧುಸಂಗ ಮಾಡಿದರೂ, ತೀರ್ಥಯಾತ್ರೆ ಮಾಡಿದರೂ ಪರಿವರ್ತನೆಗೊಳ್ಳುವುದಿಲ್ಲ, ಏಕೆಂದರೆ ಅವರಲ್ಲಿ ಸತ್‌ಸಂಸ್ಕಾರಗಳು ಕಡಿಮೆ ಪ್ರಮಾಣದಲ್ಲಿ ಇರುತ್ತವೆ, ಹೊರಗಿನ ಸತ್‌ಪ್ರಭಾವವನ್ನು ಹೀರಿಕೊಳ್ಳುವಷ್ಟು ಬಲಯುತವಾಗಿರುವುದಿಲ್ಲ. ಅಂಥವರನ್ನು ಶ್ರೀರಾಮಕೃಷ್ಣರು ಸಂನ್ಯಾಸಿಯ ಕಮಂಡಲುವಿಗೆ ಹೋಲಿಸಿದ್ದಾರೆ. ಕಮಂಡಲು ಒಂದು ಜಡ ವಸ್ತು. ಜಡವಸ್ತುವಿನಲ್ಲಿ ಹೊರಗಿನಿಂದ ಸೇರಿಸುವುದು ಅಥವಾ ಕಳೆಯುವುದರ ಮೂಲಕ ಬದಲಾವಣೆ ಸಾಧ್ಯ. ಜೀವಂತ ವಸ್ತುಗಳಲ್ಲಿ ಬದಲಾವಣೆ ಒಳಗಿನಿಂದ. ಒಂದು ಸ್ವಾರಸ್ಯಕರವಾದ ಆಂಗ್ಲ ಹೇಳಿಕೆ ಇದೆ: ‘‘When the egg is broken from the external force, life ends; When the egg is broken from the internal force, life begins.’’ (ಮೊಟ್ಟೆಯನ್ನು ಹೊರಗಿನಿಂದ ಒಡೆದರೆ ಜೀವ ಕೊನೆಗೊಳ್ಳು